## ಅಧ್ಯಾಯ–೯
# ಶಿಕ್ಷಣ ವ್ಯವಸ್ಥೆ ಮತ್ತು ಗ್ರಾಮೀಣ ಕ್ರೀಡೆಗಳು

**ಶಿಕ್ಷಣ ಪದ್ಧತಿಯ ಹಿನ್ನೆಲೆ :** ೧೮೮೦ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ರೂಪುಗೊಂಡಾಗ, ಪಿರಿಯಾಪಟ್ಟಣ ಒಂದು ಉಪ ತಾಲೂಕು ಆಗಿತ್ತು. ಅಂದರೆ ೧೮೮೨ರಲ್ಲಿ ನಮ್ಮ ರಾಜ್ಯ ವ್ಯವಸ್ಥೆಯಲ್ಲಿ ೬೦ ತಾಲ್ಲೂಕುಗಳೂ ೧೭ ಉಪತಾಲ್ಲೂಕುಗಳು ರಚನೆಗೊಂಡಿದ್ದು ಪಿರಿಯಾಪಟ್ಟಣ ಹುಣಸೂರಿನ ಉಪತಾಲ್ಲೂಕು ಎನಿಸಿಕೊಂಡಿತ್ತು. ಹುಣಸೂರು ತಾಲ್ಲೂಕು ವಿದ್ಯಾಧಿಕಾರಿಗಳೇ ಪಿರಿಯಾಪಟ್ಟಣದ ಶಾಲಾ ತನಿಖಾಧಿಕಾರವನ್ನು ಹೊಂದಿದ್ದರು. ಅಲ್ಲದೆ ಪಿರಿಯಾಪಟ್ಟಣದಲ್ಲಿ ಕಂದಾಯ ಇಲಾಖೆಯ ಡೆಪ್ಯೂಟಿ ಅಮಲ್ದಾರ್ ಅವರೇ ಶಾಲೆಗಳ ಮೇಲ್ವಿಚಾರಣೆಯನ್ನೂ ನಡೆಸುತ್ತಿದ್ದರು. ಹುಣಸೂರಿನಿಂದ ಪ್ರತಿ ತಿಂಗಳೂ ವಲಯ ವಿದ್ಯಾಧಿಕಾರಿಗಳು ಪಿರಿಯಾಪಟ್ಟಣ ವ್ಯಾಪ್ತಿಗೆ ಸೇರಿದ್ದ ಉಪಾಧ್ಯಾಯರಿಗೆ ಸಂಬಳ ಬಟವಾಡೆ ಮಾಡಲು ಬರುತ್ತಿದ್ದು, ಇಲಾಖೆಗೆ ಸಂಬಂಧಿಸಿದ ಮಾಹಿತಿಯನ್ನು ಪಡೆದುಕೊಳ್ಳುತ್ತಿದ್ದರು ಹಾಗೂ ಶಾಲಾ ಮೇಲ್ವಿಚಾರಣೆ–ತನಿಖೆ–ಇತ್ಯಾದಿಗಳನ್ನು ನಡೆಸುತ್ತಿದ್ದರು.

**ಸಾಕ್ಷರತೆ :** ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರದ ಶಾಲೆಗಳು ಸ್ಥಾಪಿತವಾಗುವ ಮೊದಲು ಹಳ್ಳಿಯ ಆಸಕ್ತರು ತಮ್ಮ ಮಕ್ಕಳೂ ಇತರರಂತೆ ಮುಂದುವರೆಯಲೆಂದು ಹೊರಗಿನಿಂದ ವಿದ್ಯಾವಂತರನ್ನು ಕರೆಸಿಕೊಂಡು ತಮ್ಮ ಮನೆಯಲ್ಲೊ ಅಥವಾ ದೇವಸ್ಥಾನ, ಛಾವಡಿಗಳಲ್ಲಿ ಒಂದು ಶಾಲೆಯನ್ನು ಪ್ರಾರಂಭಿಸಿ, ತಮ್ಮ ಊರಿನ ಮಕ್ಕಳಿಗೆ ಅಕ್ಷರ ಕಲಿಸಲಾರಂಭಿಸಿದರು. ಇದನ್ನು ಕೂಲಿಮಠವೆಂದು ಕರೆಯುತ್ತಿದ್ದರು. ಅಂತಹ ಅನೇಕ ಕೂಲಿಮಠಗಳು ಈ ಪ್ರಾಂತದಲ್ಲಿದ್ದುವು. ಮುಂದೆ ಸರಕಾರದ ವತಿಯಿಂದ ಈ ಶಾಲೆಗಳಿಗೆ ಅನುದಾನವನ್ನು ಕೊಟ್ಟು ಅವುಗಳನ್ನು ಅನುದಾನಿತ ಶಾಲೆಗಳೆಂದು (ಗ್ರ್ಯಾಂಟ್‌ಸ್ಕೂಲು) ಕರೆಯುತ್ತಿದ್ದರು. ಈ ಶಾಲೆಗಳು ೧೯೬೦ರವರೆಗೂ ಚಾಲ್ತಿಯಲ್ಲಿದ್ದವು. ಆಗ ಅಲ್ಪಸಂಬಳದ ಮೇಲೆ ಇಲ್ಲಿನ ಉಪಾಧ್ಯಾಯರು ಕೆಲಸ ಮಾಡುತ್ತಿದ್ದರು. ಒಟ್ಟಿನಲ್ಲಿ ಶೇ. ನಾಲ್ಕರಷ್ಟಿದ್ದ ವಿದ್ಯಾವಂತರ ಸಂಖ್ಯೆ ಆಗ ಶೇ. ೮ ರಿಂದ ೧೦ ಕ್ಕೇರಿತ್ತು. ಸರ್ಕಾರ ಈ ಉಪ ತಾಲ್ಲೂಕನ್ನು ಮೇಲ್ಮಟ್ಟಕ್ಕೇರಿಸಿ ಹುಣಸೂರಿನಿಂದ ಪ್ರತ್ಯೇಕಿಸಿ ೧೯೩೫ರಲ್ಲಿ ಒಂದು ಪ್ರತ್ಯೇಕ ತಾಲ್ಲೂಕನ್ನಾಗಿಸಿತು. ಅನಂತರ ಪಿರಿಯಾಪಟ್ಟಣದ ವಿದ್ಯಾಭ್ಯಾಸದ ವಲಯ (ರೇಂಜು) ಆರಂಭವಾಯ್ತು. ಪ್ರಪ್ರಥಮವಾಗಿ ವಿದ್ಯಾ ಇಲಾಖೆಯ ಕಛೇರಿ ಆರಂಭವಾದದ್ದು

೧೯೪೫-೪೬ ರಲ್ಲಿ. ಅಂದಿನಿಂದ ಈ ತಾಲೂಕಿನಲ್ಲಿ ಸರ್ಕಾರಿ ಶಾಲೆಗಳ ಸಂಖ್ಯೆ ಗಮನಾರ್ಹವಾಗಿ ಮೇಲೇರಿತು. ಕಾಡು ಪ್ರದೇಶದ ಮೂಲೆ ಮೂಲೆಯ ಹಳ್ಳಿಹಳ್ಳಿಗಳಲ್ಲೂ ಸಹ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು ಆರಂಭಗೊಂಡವು. ದೊಡ್ಡ ಹರವೆ, ದೊಡ್ಡಕಮರವಳ್ಳಿ, ಹೊನ್ನಾಪುರ ಮುಂತಾದೆಡೆಗಳಲ್ಲಿನ ಶಾಲೆಗಳು ಇದಕ್ಕೆ ಉದಾಹರಣೆಯಾಗಿವೆ. ಹೀಗೆ ಸಾಕ್ಷರರ ಸಂಖ್ಯೆ ೧೯೫೨ರ ಹೊತ್ತಿಗೆ ಗಮನಾರ್ಹವಾಗಿತ್ತು. ೨೦೦೧ರ ಗಣತಿಯಂತೆ ತಾಲೂಕಿನಲ್ಲಿದ್ದ ಒಟ್ಟು ಜನಸಂಖ್ಯೆಯಲ್ಲಿ (೦-೬ ವರ್ಷದ ಮಕ್ಕಳನ್ನು ಹೊರತುಪಡಿಸಿ) ಶೇ. ೫೯.೨ ಜನ ಸಾಕ್ಷರತೆ ಹೊಂದಿದ್ದರು. ಒಟ್ಟು ಪುರುಷರಲ್ಲಿ ಶೇ. ೬೯.೭ ಹಾಗೂ ಮಹಿಳೆಯರಲ್ಲಿ ಶೇ. ೪೭.೯ ಸಾಕ್ಷರಸ್ಥರಾಗಿದ್ದರು. ಇದು ಕ್ರಮವಾಗಿ ರಾಜ್ಯದ (ಶೇ. ೬೬.೬, ಶೇ. ೭೬.೧ ಹಾಗೂ ಶೇ. ೫೬.೯) ಹಾಗೂ ಜಿಲ್ಲೆಯ (ಶೇ. ೬೩.೫, ಶೇ. ೭೦.೯ ಹಾಗೂ ಶೇ. ೫೫.೮) ಶೇಕಡ ಪ್ರಮಾಣಕ್ಕಿಂತ ಕಡಿಮೆ ಇದ್ದು, ಜಿಲ್ಲಾ ಮಟ್ಟದಲ್ಲಿ ಮೂರನೆಯ ಸ್ಥಾನದಲ್ಲಿತ್ತು.

**ಸರ್ಕಾರಿ ಹಾಗೂ ಖಾಸಗೀ ಶಾಲೆಗಳು :** ೧೯೫೨ರ ಹೊತ್ತಿಗೆ ಸರಕಾರಿ ಪ್ರಾಥಮಿಕ ಶಾಲೆಗಳು ಸುಮಾರು ಒಂದು ನೂರರ ಗಡಿ ದಾಟಿತ್ತು. ಆಗ ಐದು ಸರ್ಕಾರಿ ಮಾಧ್ಯಮಿಕ ಶಾಲೆಗಳು ಮತ್ತು ಮೂರು ಹಿರಿಯ ಪ್ರಾಥಮಿಕ ಶಾಲೆಗಳು (ಅಂದರೆ ಒಂದರಿಂದ ಎಂಟನೇ ತರಗತಿಯವರೆಗಿನ ಶಾಲೆ) ಇದ್ದು ನೂರಾರು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಮುಂದಿನ ಪ್ರೌಢವಿದ್ಯಾಭ್ಯಾಸಕ್ಕೆ ಅನುಕೂಲವಿದ್ದವರು ನಗರ ಪ್ರದೇಶದ ಪ್ರೌಢಶಾಲೆಗಳಿಗೆ ತೆರಳಿ, ಇಲ್ಲದವರು ತಮ್ಮ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿಕೊಂಡು ಊರಲ್ಲೇ ಕಾಲಯಾಪನೆ ಮಾಡುವ ಪರಿಸ್ಥಿತಿ ಇತ್ತು. ಇದನ್ನು ಮನಗಂಡ ಸರ್ಕಾರ ಜಿಲ್ಲಾ ಬೋರ್ಡ್ ವತಿಯಿಂದ ತಾಲ್ಲೂಕಿನ ಮೂರು ಮುಖ್ಯ ಸ್ಥಳಗಳಲ್ಲಿ ಪ್ರೌಢಶಾಲೆಗಳನ್ನು ತೆರೆದು ಮಕ್ಕಳ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಟ್ಟಿತು.

**ಪ್ರಮುಖ ಶಿಕ್ಷಣದ ಹಂತಗಳು :** ೧೯೭೦-೮೦ರ ಅವಧಿಯಲ್ಲಿ ಹಿಂದೆ ಇದ್ದ ಆಡಳಿತ ವ್ಯವಸ್ಥೆಯನ್ನು ಪುನಾರಚಿಸಿ ಶೈಕ್ಷಣಿಕ ಅಭಿವೃದ್ಧಿಗಾಗಿ ಆಗಿದ್ದ ವಲಯ ವಿದ್ಯಾಧಿಕಾರಿಗಳ ಹುದ್ದೆಯನ್ನು ಮೇಲ್ದರ್ಜೆಗೇರಿಸಿ ಸಹಾಯಕ ಶಿಕ್ಷಣಾಧಿಕಾರಿಗಳೆಂದು ಹೆಸರಿಸಿ ಅವರ ಸಹಾಯಕ್ಕೆ ಇಬ್ಬರು ಇನ್‌ಸ್ಪೆಕ್ಟರುಗಳನ್ನು ನೇಮಿಸಿದರು. ಇವರು ತಾಲೂಕಿನಲ್ಲಿರುವ ಎಲ್ಲಾ ಶಾಲೆಗಳಲ್ಲಿರಬಹುದಾದ ಕುಂದು ಕೊರತೆಗಳನ್ನು ನಿವಾರಿಸಲು ಶಾಲಾ ಅಭಿವೃದ್ಧಿ ಸಮಿತಿಗಳನ್ನು ರಚಿಸಿ ಅದರ ಮೇಲ್ವಿಚಾರಣೆ ನಡೆಸುತ್ತಾ ಮಕ್ಕಳಿಗೆ ಮಧ್ಯಾಹ್ನದ ಊಟದ ಏರ್ಪಾಡನ್ನು ಅಮೆರಿಕದ 'ಕೇರ್' ಸಂಸ್ಥೆಯ ಸಹಕಾರದೊಡನೆ ಜಾರಿಗೆ ತರಲು ಶ್ರಮಿಸಿದರು. ಇದರ ಫಲವಾಗಿ ಶಾಲೆಯಲ್ಲಿ ವಿದ್ಯಾರ್ಥಿಗಳ ಹಾಜರಾತಿ ವೃದ್ಧಿಸತೊಡಗಿತು. ಶಾಲೆಯ ಪಾಠ ಪ್ರವಚನಗಳು ಆಸಕ್ತಿ ಪೂರ್ಣವಾಗಿ ನಡೆದು ಪರೀಕ್ಷಾ ಫಲಿತಾಂಶ ಉತ್ತಮಗೊಂಡಿತು. ತಾಲ್ಲೂಕಿನ ಶೇ. ೮೦ ಗ್ರಾಮಗಳಲ್ಲಿ ಶಾಲೆಗಳು ನಡೆಯುತ್ತಿದ್ದು ಉಳಿದ ಹಳ್ಳಿಗಳೂ ಶಾಲೆ ಪಡೆಯಲು ಕಾತರವಾಗಿದ್ದವು. ಹೀಗೆ ಕೂಲಿ ಮಠದಿಂದ ಗ್ರ್ಯಾಂಟ್ ಸ್ಕೂಲು, ಪ್ರಾಥಮಿಕ ಶಾಲೆ, ಅಲ್ಲಿಂದ ಹಿರಿಯ ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆ, ಪ್ರೌಢಶಾಲೆ, ಪದವಿಪೂರ್ವ ಹಾಗೂ ಪದವಿ ಕಾಲೇಜುಗಳ

ಸೇರ್ಪಡೆಯಾಯಿತು. ೧೯೫ರ ಹೊತ್ತಿಗೆ ಈ ತಾಲೂಕಿನಲ್ಲಿ ೨೭೦ ಸರ್ಕಾರಿ ಪ್ರಾಥಮಿಕ ಶಾಲೆಗಳೂ ೧೯ ಸರ್ಕಾರಿ ಪ್ರೌಢಶಾಲೆಗಳೂ ಐದು ಸಂಯುಕ್ತ ಪದವಿಪೂರ್ವ ಕಾಲೇಜು ಹಾಗೂ ಖಾಸಗಿವಲಯದಲ್ಲಿ ಸುಮಾರು ೩೦ ಪ್ರಾಥಮಿಕ ಶಾಲೆಗಳೂ, ೨೦ ಪ್ರೌಢಶಾಲೆಗಳೂ ಹಾಗೂ ಎರಡು ಪದವಿಪೂರ್ವ ಕಾಲೇಜುಗಳೂ ನಡೆಯುತ್ತಿದ್ದವು.

**೨೦೦೬ರ ಮಾರ್ಚ್‌ನಲ್ಲಿದ್ದ ಜನವರಿಯಲ್ಲಿರುವ ತಾಲ್ಲೂಕಿನ ಶೈಕ್ಷಣಿಕ ಸಂಸ್ಥೆಗಳ ಪಟ್ಟಿ**

| ಸಂಖ್ಯೆ | ಅಂಗನವಾಡಿ / ಶಾಲೆ / ಕಾಲೇಜು | ಸರ್ಕಾರಿ | ಖಾಸಗಿ | ಒಟ್ಟು |
|---|---|---|---|---|
| ೧ | ಅಂಗನವಾಡಿಗಳು | ೨೬೬ | – | ೨೬೬ |
| ೨ | ಪ್ರಾಥಮಿಕ ಶಾಲೆಗಳು | ೨೭೦ | ೩೦ | ೩೦೦ |
| ೩ | ಪ್ರೌಢಶಾಲೆಗಳು | ೧೯ | ೨೧ | ೪೦ |
| ೪ | ಪದವಿಪೂರ್ವ ಕಾಲೇಜು | ೫ | ೨ | ೭೯ |
| ೫ | ಪದವಿ ಕಾಲೇಜ (ಬಿ.ಎ., ಬಿ.ಕಾಂ. ಮಾತ್ರ) | ೧ | – | ೧ |
| ೬ | ಎಸ್.ಎಸ್.ಎಲ್.ಸಿ. ಪರೀಕ್ಷಾ ಕೇಂದ್ರ | ೯ | – | ೯ |

**ಅಂಗನವಾಡಿ:** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಈ ತಾಲೂಕಿನ ಎಲ್ಲಾ ಗ್ರಾಮಗಳಲ್ಲೂ ಅಂಗನವಾಡಿ ಕೇಂದ್ರಗಳು ಸ್ಥಾಪಿತವಾಗಿವೆ. ಇಂತಹ ಒಟ್ಟು ೨೬೬ ಕೇಂದ್ರಗಳಿದ್ದು, ಅಂಗನವಾಡಿ ಕಾರ್ಯಕರ್ತೆಯರೂ ಸಹಾಯಕರೂ ಸೇರಿ ೫೨೨ ಜನರು ಈ ಕೇಂದ್ರದ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಮಕ್ಕಳಿಗೆ ಪೌಷ್ಠಿಕ ಆಹಾರ ಮತ್ತು ಆರೋಗ್ಯದ ಕಡೆ ಹೆಚ್ಚು ಗಮನ ಹರಿಸುತ್ತಿರುತ್ತಾರೆ. ಇದರಿಂದ ಮಕ್ಕಳ ಶಾರೀರಕ ಹಾಗೂ ಬೌದ್ಧಿಕ ಧೃಡ ಬೆಳವಣಿಗೆಗೆ ಸಹಕಾರಿಯಾಗಿದೆ. ಅದೇ ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೩೦೧ ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದವು.

೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನ ೩೧೭ ಪ್ರಾಥಮಿಕ ಶಾಲೆಗಳಲ್ಲಿ ೧೪,೬೨೮ ಬಾಲಕರು ಹಾಗೂ ೧೪,೨೨೧ ಬಾಲಕಿಯರು ವ್ಯಾಸಂಗ ಮಾಡುತ್ತಿದ್ದರು.

**ಆಡಳಿತ ಸುಧಾರಣೆ :** ೧೯೫ರಲ್ಲೇ ತಾಲ್ಲೂಕನ್ನು ಶಿಕ್ಷಣಕ್ಷೇತ್ರವೆಂದು ಗುರುತಿಸಿ ಸಹಾಯಕ ಶಿಕ್ಷಣಾಧಿಕಾರಿಗಳ ಹುದ್ದೆಯನ್ನು ಮೇಲ್ದರ್ಜೆಗೇರಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳೆಂದು ಕರೆದು ತಾಲ್ಲೂಕಿನ ಎಲ್ಲಾ ಹಂತಗಳ ಶಿಕ್ಷಣದ ವ್ಯವಸ್ಥೆಯ ಮೇಲ್ವಿಚಾರಣೆಯು ಇವರ ಸುಪರ್ದಿಗೆ ಬಂದಿತು. ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಯವರೆಗಿನ ಹಂತದವರೆಗೆ ಇವರ ಆಡಳಿತ ನಡೆಯುತ್ತದೆ. ೧೯೭೭ರಿಂದ ಜಿಲ್ಲಾ ಶಿಕ್ಷಣ ಯೋಜನೆಗೆ ಒಳಪಟ್ಟು ಕ್ಷೇತ್ರ ಶಿಕ್ಷಣಾಧಿಕಾರಿಗಳ ನಿರ್ದೇಶನದಲ್ಲಿ ಕೆಲಸ ನಿರ್ವಹಿಸಲು ಕ್ಷೇತ್ರ ಸಂಪನ್ಮೂಲ ಸಂಯೋಜನಾಧಿಕಾರಿ ಹುದ್ದೆಯನ್ನು ಮಂಜೂರು ಮಾಡಿದ್ದಾರೆ. ಶೈಕ್ಷಣಿಕ ಅಭಿವೃದ್ಧಿಗಾಗಿ ತಾಲ್ಲೂಕನ್ನು ೧೧ ಗುಂಪುಗಳನ್ನಾಗಿ ಮಾಡಿ ೧೧ ಜನ ಕ್ಷೇತ್ರ

ಸಂಪನ್ಮೂಲ ವ್ಯಕ್ತಿಗಳನ್ನು ನೇಮಕಗೊಳಿಸಲಾಗಿದೆ. ಇವರು ಶಿಕ್ಷಣ ಅಭಿವೃದ್ಧಿಗೆ ನೆರವಾಗುತ್ತಿದ್ದಾರೆ. ಈ ರೀತಿಯ ಪುನರ್ವ್ಯವಸ್ಥೆಯಿಂದ ೧೧ ಗುಂಪುಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಅಭಿವೃದ್ಧಿಗಾಗಿ ಮಧ್ಯಾಹ್ನದ ಬಿಸಿಯೂಟ ವ್ಯವಸ್ಥೆ, 'ನಲಿ–ಕಲಿ'ಯುವ ಸರ್ವಶಿಕ್ಷಣ ಅಭಿಯಾನ ಇತ್ಯಾದಿ ಯೋಜನೆಗಳನ್ನು ಹಮ್ಮಿಕೊಳ್ಳಲಾಯಿತು.

**ಪ್ರೌಢಶಾಲೆ :** ತಾಲೂಕಿನ ಪ್ರೌಢಶಾಲೆಗಳು ಪ್ರಾರಂಭದಲ್ಲಿಪಿರಿಯಾಪಟ್ಟಣ, ಬೆಟ್ಟದಪುರ, ಮತ್ತು ರಾವಂದೂರುಗಳಲ್ಲಿ ಆರಂಭವಾಗಿ ದಕ್ಷ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಏರುತ್ತಾ ಪ್ರೌಢವಿದ್ಯಾಶಾಲೆಗಳ ಅವಶ್ಯಕತೆ ಹೆಚ್ಚಾದುದರ ಪರಿಣಾಮವಾಗಿ ಇನ್ನೂ ಹತ್ತಾರು ಶಾಲೆಗಳು ಸರ್ಕಾರಿ ಹಾಗೂ ಖಾಸಗಿಯವರ ನೇತೃತ್ವದಲ್ಲಿ ಆರಂಭಗೊಂಡಿವೆ. ಇಂದು ಸರ್ಕಾರಿ ಪ್ರೌಢಶಾಲೆಗಳು ೧೯, ಖಾಸಗಿ ಶಾಲೆಗಳು ೨೦, ಹೀಗೆ ಒಟ್ಟು ೩೯ ಪ್ರೌಢಶಾಲೆಗಳು ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಅದೇ ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ೪೩ ಪ್ರೌಢಶಾಲೆಗಳಲ್ಲಿ ೪,೦೫೮ ಬಾಲಕರು ಹಾಗೂ ೪,೬೯೩ ಬಾಲಕಿಯರು ವ್ಯಾಸಂಗ ಮಾಡುತ್ತಿದ್ದರು. ಅಲ್ಲದೇ ಪ್ರೌಢಶಾಲಾ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಉಚಿತ ಪುಸ್ತಕ, ಸಮವಸ್ತ್ರ, ಸೈಕಲನ್ನು ಸರ್ಕಾರದ ವತಿಯಿಂದ ನೀಡಲಾಗುತ್ತಿದೆ.

**ಟ್ರೈಮಿಸ್ಟರ್ ಪದ್ಧತಿ :** ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಪದ್ಧತಿಯಲ್ಲಿ ಸುಧಾರಣೆ ತರುವ ಉದ್ದೇಶದಿಂದ ೨೦೦೪ರ ಶಿಕ್ಷಣ ತಜ್ಞರ ಸಮಾವೇಶದಲ್ಲಿ ಹಲವು ನಿರ್ಣಯಗಳನ್ನು ಕೈಗೊಳ್ಳಲಾಗಿತ್ತು. ಅದರಂತೆ ಅಧಿಕ ಪಠ್ಯಕ್ರಮ, ಅತಿಯಾದ ಪುಸ್ತಕಗಳ ಹೊರೆ ಹಾಗೂ ಪರೀಕ್ಷಾ ಭೀತಿಗಳಿಂದ ಮಕ್ಕಳನ್ನು ಮುಕ್ತಗೊಳಿಸುವ ಉದ್ದೇಶದಿಂದ ಈ ತ್ರೈಮಾಸಿಕ ಪದ್ಧತಿಯನ್ನು ೨೦೦೪–೦೫ರ ಶೈಕ್ಷಣಿಕ ವರ್ಷದಿಂದ ರಾಜ್ಯದಾದ್ಯಂತ ಜಾರಿಗೆ ತರಲಾಗಿದೆ. ಈ ಬದಲಾವಣೆಯಿಂದಾಗಿ ಹಿಂದೆ ನಡೆಸಲಾಗುತ್ತಿದ್ದ ಕಿರು, ಮಧ್ಯಂತರ ಹಾಗೂ ವಾರ್ಷಿಕ ಪರೀಕ್ಷೆಗಳನ್ನು ರದ್ದುಪಡಿಸಲಾಗಿದೆ. ಮೂರು ಮೂರು ತಿಂಗಳ (ಜುಲೈ–ಸೆಪ್ಟೆಂಬರ್; ಅಕ್ಟೋಬರ್–ಡಿಸೆಂಬರ್; ಜನವರಿ–ಮಾರ್ಚ್)ಅವಧಿಗೆ ಮಾತ್ರ ಪಾಠಪ್ರವಚನ, ಮೌಲ್ಯಮಾಪನಗಳು ನಡೆದು ಅಂಕಗಳಿಗೆ ಬದಲು ಶ್ರೇಣಿ ನೀಡುವ ಪದ್ಧತಿಯನ್ನು ಅಳವಡಿಸಲಾಗಿದೆ. ಮೇಲ್ಕಂಡ ಮೂರು ಅವಧಿಯ ಮೌಲ್ಯಮಾಪನವನ್ನು ಆಧರಿಸಿ ಮಕ್ಕಳನ್ನು ಮುಂದಿನ ತರಗತಿಗೆ ತೇರ್ಗಡೆ ಮಾಡಲಾಗುತ್ತದೆ.

ಇಷ್ಟೆಲ್ಲಾ ಸುಧಾರಣೆಯ ನಡುವೆಯೂ ೬–೧೪ ವಯೋಮಿತಿಯ ಮಕ್ಕಳನ್ನು ಹಂತಹಂತವಾಗಿ ಶಾಲೆಗೆ ದಾಖಲು ಮಾಡಿಕೊಳ್ಳುವ ಚಿಣ್ಣರ ಅಂಗಳ ಕಾರ್ಯಕ್ರಮವನ್ನು ೨೦೦೧–೦೨ರಲ್ಲಿ ಜಾರಿಗೊಳಿಸಲಾಗಿದೆ. ಅದಕ್ಕಾಗಿ ರಾಜ್ಯದಲ್ಲಿ ಗುರುತಿಸಲ್ಪಟ್ಟಿರುವ ೧೭೬೬ ಕೇಂದ್ರಗಳಲ್ಲಿ ಕೆಲವು ಈ ತಾಲೂಕಿನಲ್ಲೂ ಇದ್ದವು. ಹೆಣ್ಣುಮಕ್ಕಳಿಗಿದ್ದ ಉಚಿತ ಶಿಕ್ಷಣ ವ್ಯವಸ್ಥೆಯನ್ನು (ಹಿಂದೆ ಜಾರಿಯಲ್ಲಿದ್ದ ೧–೪ನೇ ತರಗತಿಯವರೆಗೆ ಇತರೆ ಹೆಣ್ಣುಮಕ್ಕಳಿಗೆ, ೧–೭ನೇ ತರಗತಿವರೆಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ

ಹೆಣ್ಣುಮಕ್ಕಳಿಗೆ ನೀಡುತ್ತಿದ್ದ ಉಚಿತ ಸಮವಸ್ತ್ರ ಪಠ್ಯಪುಸ್ತಕ, ಶುಲ್ಕ ವಿನಾಯ್ತಿ ಸೌಲಭ್ಯ) ೧–೧೨ನೆಯ ತರಗತಿಯವರೆವಿಗೂ ವಿಸ್ತರಿಸಲಾಗಿದೆ. ಈ ಸೌಲಭ್ಯ ತಾಲೂಕಿನ ಹೆಣ್ಣುಮಕ್ಕಳಿಗೂ ಲಭಿಸುತ್ತಿದೆ. ನಂತರದಲ್ಲಿ ಟ್ರೈಮಿಸ್ಟರ್ ಪದ್ಧತಿಯನ್ನು ಹಿಂತೆಗೆದುಕೊಂಡು, ಸೆಮಿಸ್ಟರ್ ಪದ್ಧತಿಯನ್ನು ಜಾರಿಗೊಳಿಸಲಾಗಿದೆ.

**ಅಕ್ಷರ ದಾಸೋಹ :** ಮಧ್ಯಾಹ್ನದ ಊಟ, ಸಂಸ್ಥಾನದ ಶಾಲೆಗಳಲ್ಲಿ ೧೯೪೬–೪೭ರಷ್ಟು ಹಿಂದೆಯೇ ೧–೧೦ನೇ ತರಗತಿಯವರೆಗಿನ ದುರ್ಬಲವರ್ಗದ ಮಕ್ಕಳಿಗೆ ಮಧ್ಯಾಹ್ನದ ಊಟ ನೀಡುವ ವ್ಯವಸ್ಥೆ ಇತ್ತು. ಮುಂದೆ ಇದು ಹೆಚ್ಚು ಸುಧಾರಣೆಯೊಂದಿಗೆ ವ್ಯಾಪಕವಾಗಿ ಬಳಕೆಗೆ ಬಂದಿದೆ. ಇದೇ ರೀತಿ ಅಕ್ಷರ ದಾಸೋಹ ಕಾರ್ಯಕ್ರಮದಡಿ ಐದನೆಯ ತರಗತಿಯವರೆಗಿನ ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಶಾಲೆಯಲ್ಲೇ ಒದಗಿಸಲಾಗುತ್ತಿದೆ. ಈ ಯೋಜನೆ ಮುಖ್ಯ ಉದ್ದೇಶ ಹೆಚ್ಚು ಮಕ್ಕಳನ್ನು ಶಾಲೆಯತ್ತ ಸೆಳೆಯುವ ಮೂಲಕ ಮಕ್ಕಳ ಹಾಜರಾತಿಯನ್ನು ಸುಧಾರಿಸುವುದೇ ಆಗಿದ್ದು, ತಾಲೂಕಿನ ಶಾಲೆಗಳಲ್ಲೂ ಈ ಯೋಜನೆಯು ಅನುಷ್ಠಾನಗೊಂಡಿದೆ.

**ಪದವಿ ಪೂರ್ವ ಕಾಲೇಜು :** ೧೯೭೩ ರಲ್ಲಿ ಪದವಿ ಪೂರ್ವ ಕಾಲೇಜು ಪ್ರಪ್ರಥಮವಾಗಿ ಪಿರಿಯಾಪಟ್ಟಣದ ಸರ್ಕಾರಿ ಪ್ರೌಢಶಾಲೆಯಲ್ಲಿ ಆರಂಭವಾಗಿ ಇಂದು ೬೦೦ ವಿದ್ಯಾರ್ಥಿಗಳಿಗೆ ಆಸರೆಯಾಗಿದೆ, ಈ ಒಂದು ಪದವಿಪೂರ್ವ ಕಾಲೇಜು ತಾಲ್ಲೂಕಿನ ಎಲ್ಲಾ ವಿದ್ಯಾರ್ಥಿಗಳ ಜ್ಞಾನತೃಷೆಗೆ ಸಾಕಾಗದೇ ಇನ್ನೂ ಹಲವು ಕಾಲೇಜುಗಳು ಪ್ರಾರಂಭವಾಗಿವೆ. ಇದರಲ್ಲಿ ಐದು ಸರ್ಕಾರಿ ಪದವಿ ಪೂರ್ವ ಕಾಲೇಜುಗಳೂ ಖಾಸಗಿಯಾಗಿ ಎರಡು ಕಾಲೇಜುಗಳೂ ಸೇರಿ ಒಟ್ಟು ಏಳು ಪದವಿ ಪೂರ್ವ ಶಿಕ್ಷಣ ನೀಡುತ್ತವೆ. ಅದೇ ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ೧೬ ಪದವಿಪೂರ್ವ ಕಾಲೇಜುಗಳಲ್ಲಿ ೨೦೫೫ ಬಾಲಕರು ಹಾಗೂ ೨೦೩೭ ಬಾಲಕಿಯರು ವಿದ್ಯಾಭ್ಯಾಸದಲ್ಲಿ ನಿರತರಾಗಿದ್ದರು. ಅಲ್ಲದೇ ತಾಲೂಕಿನಲ್ಲಿದ್ದ ಏಕೈಕ ಪದವಿ ಕಾಲೇಜಿನಲ್ಲಿ ೨೮೭ ಹುಡುಗರು ಹಾಗೂ ೧೫೫ ಹುಡುಗಿಯರು ಅಭ್ಯಾಸ ಮಾಡುತ್ತಿದ್ದರು.

**ಪದವಿ ಶಿಕ್ಷಣ :** ಕಲೆ, ವಿಜ್ಞಾನ, ವಾಣಿಜ್ಯ ವಿಷಯಗಳಲ್ಲಿ ಮೂರು ವರ್ಷಗಳ ಪದವಿ ಶಿಕ್ಷಣವನ್ನು ನೀಡುವ ಪ್ರಥಮ ದರ್ಜೆ ಕಾಲೇಜುಗಳು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಶೈಕ್ಷಣಿಕವಾಗಿ ಕಾರ್ಯನಿರ್ವಹಿಸುತ್ತವೆ. ಮೈಸೂರು ವಿಶ್ವವಿದ್ಯಾಲಯವು ಆರಂಭಗೊಂಡು (೧೯೧೬–೧೭) ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ಒಂದು ಪದವಿ ಕಾಲೇಜಿನಲ್ಲಿ ಒಟ್ಟು ೪೪೬ (೨೮೭ ವಿದ್ಯಾರ್ಥಿಗಳು ಹಾಗೂ ೧೫೫ ವಿದ್ಯಾರ್ಥಿನಿಯರು) ವ್ಯಾಸಂಗಾರ್ಥಿಗಳಿದ್ದರು.

**ವಯಸ್ಕರ ಶಿಕ್ಷಣ :** ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ೧೯೪೭ ರಿಂದ ೭೫ ರವರೆಗೆ ವಯಸ್ಕರ ಶಿಕ್ಷಣ ಬಹಳ ಯಶಸ್ವಿಯಾಗಿ ನಡೆದು ದೇಶದ ಸಾಕ್ಷರತೆಗೆ ಸಾಕಷ್ಟು ಕಾಣಿಕೆ ಸಲ್ಲಿಸಿದೆ. ಈ ತಾಲೂಕಿನಲ್ಲಿ ೧೯೪೭ ರಿಂದ ೭೦ ರವರೆಗೆ ಅನೇಕ

ಹಳ್ಳಿಗಳಲ್ಲಿ ರಾತ್ರಿ ಶಾಲೆಗಳು ನಡೆಯುತ್ತಿದ್ದುವಲ್ಲದೆ ವಯಸ್ಕರ ಅನುಕೂಲಕ್ಕಾಗಿ ಪುಸ್ತಕ ಭಂಡಾರಗಳನ್ನೂ ನಡೆಸುತ್ತಿದ್ದುವು. ೧೯೭೫ ರಿಂದೀಚೆಗೆ ವಯಸ್ಕರ ಶಿಕ್ಷಣ ಸಮಿತಿ ರದ್ದಾಗಿದ್ದು, ಸಂಪೂರ್ಣ ಸಾಕ್ಷರತಾ ಆಂದೋಲನದಡಿ ಜಿಲ್ಲಾ ಮತ್ತು ತಾಲೂಕು ಸಾಕ್ಷರತಾ ಸಮಿತಿಗಳು ಸಾಕ್ಷರತಾ ಚಟುವಟಿಕೆ ನಡೆಸುತ್ತಿವೆ. ಕೆಲವು ಕಾಲ ಶಿಕ್ಷಣ ಇಲಾಖೆಯಿಂದ 'ಅನೌಪಚಾರಿಕ ಶಿಕ್ಷಣ ಯೋಜನೆ' ಎಂಬ ಯೋಜನೆ ಆಶ್ರಯದಲ್ಲಿ ೧೪ ವರ್ಷದಿಂದ ಮೇಲ್ಪಟ್ಟ ವಯಸ್ಕರೆಲ್ಲರಿಗೂ ಜಿಲ್ಲಾ ಪರಿಷತ್ ಸಹಕಾರದೊಡನೆ ಶಿಕ್ಷಣವನ್ನು ಕೊಡುತ್ತಿದ್ದರು. ಇದರಿಂದ ಸಾಕ್ಷರತೆಯ ಪ್ರಾಮಾಣ ಹೆಚ್ಚಾಯಿತು.

**ವಿದ್ಯಾರ್ಥಿ ನಿಲಯಗಳು :** ತಾಲೂಕಿನಲ್ಲಿ ಪರಿಶಿಷ್ಟಜಾತಿ ವಿದ್ಯಾರ್ಥಿಗಳಿಗಾಗಿ ಮೂರು ಮೆಟ್ರಿಕ್ ಪೂರ್ವ ಹಾಗೂ ಒಂದು ಅನುದಾನಿತ ಮತ್ತು ಮೆಟ್ರಿಕ್ ನಂತರದ ಸರ್ಕಾರಿ ವಿದ್ಯಾರ್ಥಿ ನಿಲಯಗಳಿದ್ದವು. ಅಲ್ಲದೆ ಪರಿಶಿಷ್ಟ ಪಂಗಡಕ್ಕೆ ಸೇರಿದ ನಾಲ್ಕು ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳೂ ಇದ್ದವು. ಮಿಗಿಲಾಗಿ ಹಿಂದುಳಿದ ವರ್ಗದ ವ್ಯಾಸಂಗಾರ್ಥಿಗಳಿಗಾಗಿ ಎಂಟು ಮೆಟ್ರಿಕ್‌ಪೂರ್ವ (೪೧೦ ಮಕ್ಕಳ) ಹಾಗೂ ಒಂದು ಅನುದಾನಿತ (೭೫ ಮಕ್ಕಳ) ಮತ್ತು ಮೆಟ್ರಿಕ್ ನಂತರದ ಒಂದು (೭೫ ಮಕ್ಕಳು) ವಿದ್ಯಾರ್ಥಿ ನಿಲಯಗಳು ತಾಲೂಕಿನಲ್ಲಿದ್ದವು.

**ವಸತಿ ಶಾಲೆ :** ತಾಲೂಕಿನಲ್ಲಿ ಮೂರು ಆಶ್ರಮ ಶಾಲೆ (೪೭೫ ಮಕ್ಕಳು) ಹಾಗೂ ಶ್ರೀ ಮೊರಾರ್ಜಿ ದೇಸಾಯಿ ವಸತಿ ಶಾಲೆ (೨೫೦ ಮಕ್ಕಳು) ಕಾರ್ಯ ನಿರ್ವಹಿಸುತ್ತಿದ್ದು, ಗ್ರಾಮೀಣ ಮಕ್ಕಳಿಗೆ ಉತ್ತಮ ಸೌಕರ್ಯವನ್ನು ನೀಡುತ್ತಿದೆ.

**ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ :** ತಾಲ್ಲೂಕಿನಲ್ಲಿ ಒಟ್ಟು ೧೫ ಸಾರ್ವಜನಿಕ ಗ್ರಂಥಾಲಯಗಳಿವೆ. ತಾಲ್ಲೂಕು ಕೇಂದ್ರದಲ್ಲಿ ಮುಖ್ಯ ಗ್ರಂಥಾಲಯವಿದ್ದು ತಾಲ್ಲೂಕಿನಾದ್ಯಂತ ಪ್ರಮುಖ ಗ್ರಾಮಗಳಲ್ಲಿ ೧೪ ಶಾಖೆಗಳು ಇವೆ. ಮುಖ್ಯ ಗ್ರಂಥಾಲಯದಲ್ಲಿ ೨೫ ಸಾವಿರ ಪುಸ್ತಕಗಳಿವೆ. ೧೪ ಶಾಖೆಗಳಲ್ಲೂ ಒಂದೊಂದು ಸಣ್ಣ ಗ್ರಂಥಾಲಯಗಳಿದ್ದು ಗ್ರಂಥಗಳ ಸಂಖ್ಯೆ ೩೦೦ ರಷ್ಟಿದೆ. ಮುಖ್ಯ ಗ್ರಂಥಾಲಯದಲ್ಲಿ ನಾಡಿನ ಪತ್ರಿಕೆಗಳೂ, ನಿಯತಕಾಲಿಕೆಗಳೂ, ವಾರಪತ್ರಿಕೆಗಳೂ, ಮಾಸಿಕ ಪತ್ರಿಕೆಗಳೂ ಬರುತ್ತಿದ್ದು ಪ್ರತಿನಿತ್ಯ ನೂರಾರು ಜನ ಇದರ ಉಪಯೋಗ ಪಡೆಯುತ್ತಿದ್ದಾರೆ. ಇದರಿಂದ ಸಾರ್ವಜನಿಕರ ಸಾಮಾಜಿಕ, ಆರ್ಥಿಕ, ರಾಜಕೀಯ ಜ್ಞಾನಗಳ ಅಭಿವೃದ್ಧಿಗೆ ಸಹಕಾರಿಯಾಗಿದೆ. ಗ್ರಂಥಾಲಯವನ್ನು ಹೊಂದಿರುವ ಸ್ಥಳಗಳೆಂದರೆ ಮುಖ್ಯ ಗ್ರಂಥಾಲಯ ಪಿರಿಯಾಪಟ್ಟಣ, ಶಾಖಾ ಗ್ರಂಥಾಲಯಗಳು, ಕಣಗಾಲು, ಹಲಗನಹಳ್ಳಿ, ಬೆಟ್ಟದಪುರ, ಕಿತ್ತೂರು, ರಾವಂದೂರು, ಕಂಪಲಾಪುರ, ಪಂಡಿತವಳ್ಳಿ, ದೊಡ್ಡ ಕಮರವಳ್ಳಿ, ಹುಣಸವಾಡಿ, ಚಿಟ್ಟೇನಹಳ್ಳಿ, ಕೋಮಲಾಪುರ, ಮಾಕೋಡು, ಮಾಲಂಗಿ ಹಾಗೂ ರಾಮನಾಥ ತುಂಗಗಳಲ್ಲಿವೆ. ಇನ್ನೂ ಕೆಲವು ಹಳ್ಳಿಗಳಿಗೆ ಮುಂದಿನ ವರ್ಷಗಳಲ್ಲಿ ಮಂಜೂರು ಮಾಡುವ ನಿರೀಕ್ಷೆ ಇದೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ಒಟ್ಟು ೨೮ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿದ್ದವು.

## ಕ್ರೀಡೆಗಳು

ಆದಿ ಕಾಲದಿಂದ ಇಂದಿನವರೆಗೂ ಕ್ರೀಡೆಗಳು ಬೆಳೆಯುತ್ತಾ ಬಂದಿವೆ. ಕಾಲದಿಂದ ಕಾಲಕ್ಕೆ, ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಕ್ರೀಡೆಗಳು ಬದಲಾಗುತ್ತಾ ಹೋಗುತ್ತವೆ.

ಪ್ರಸ್ತುತ ಬ್ಯಾಡ್ಮಿಂಟನ್, ಕೇರಂ, ಚೆಸ್, ಷಟ್ಲುಕಾಕ್, ಮುಂತಾದ ನವ್ಯ ಕ್ರೀಡೆಗಳು ಗ್ರಾಮೀಣ ಹುಡುಗರ ನೆಚ್ಚಿನ ಆಟಗಳಾಗಿವೆ. ಇವುಗಳಿಂದಾಗಿ ಹಳ್ಳಿಗಳಲ್ಲೇ ಹುಟ್ಟಿಕೊಂಡ ಹಲವಾರು ಕ್ರೀಡೆಗಳು ಇಂದು ನಶಿಸುತ್ತಿರುವುದು ವಿಷಾದನೀಯ, ಗೋಲಿ ಆಟ, ಬುಗುರಿ ಆಟ, ಕಡ್ಡಿಆಟ, ಪಚ್ಚಿಆಟ, ಟಿಕ್ಕಿಆಟ, ಅಳಿಗುಳಿಮನೆ ಆಟದಂತಹ ಶುದ್ಧ ದೇಸೀಯ ಕ್ರೀಡೆಗಳು ವಿನಾಶದ ಅಂಚಿನಲ್ಲಿವೆ, ಇಂಥ ಹಲವಾರು ಗ್ರಾಮೀಣ ಕ್ರೀಡೆಗಳು ನಶಿಸುತ್ತಾ ಹೋದಂತೆ ನಗರ ಕ್ರೀಡೆಗಳು ತಲೆ ಎತ್ತುತ್ತಾ ಆ ಸ್ಥಾನವನ್ನು ತುಂಬುತ್ತಾ ಸಾಗಿವೆ. ಹಳೆಯದರ ಜೊತೆಗೆ ಹೊಸತನ್ನೂ ಉಳಿಸಿಕೊಂಡಿರುವ ಹಳ್ಳಿಗಳು ವಿರಳ, ಇಂದು ನಾವು ಯಾವ ಹಳ್ಳಿಯ ದರ್ಶನ ಮಾಡಿದರೂ ಅಲ್ಲಿ ಸಾಮಾನ್ಯವಾಗಿ ಕಾಣುವುದು ಕ್ರಿಕೆಟ್, ವಾಲಿಬಾಲ್‌ನಂತಹ ಕ್ರೀಡೆಗಳು.

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಸಾಮಾನ್ಯವಾಗಿ ಜನಪ್ರಿಯವಾಗಿರುವ ಕ್ರೀಡೆಗಳೆಂದರೆ, ಕ್ರಿಕೆಟ್, ವಾಲಿಬಾಲ್, ಬ್ಯಾಡ್‌ಮಿಂಟನ್. ಉಳಿದಂತೆ ಕೇರಂ, ಚೆಸ್, ಪುಟ್‌ಬಾಲ್, ಕರಾಟೆಯಂತಹ ಆಟಗಳು ಅಲ್ಲಲ್ಲಿ ಮಾತ್ರ ಕಾಣಬಹುದು. ಜೊತೆಗೆ ಚಿಕ್ಕ ಮಕ್ಕಳಿಗೆ ಮಾತ್ರ ಮೀಸಲಾದ ಬುಗುರಿ, ಗೋಲಿ ಆಟಗಳು ಪ್ರತಿ ಊರುಗಳಲ್ಲಿಯೂ ಸಾಮಾನ್ಯವಾಗಿವೆ.

ಬೆಟ್ಟದತುಂಗ ಗ್ರಾಮದಲ್ಲಿ ಪ್ರತಿವರ್ಷ ದೀಪಾವಳಿಯಂದು ನಡೆಯುವ 'ಅಳಿಯನ ಗುಂಡು' ಸ್ಪರ್ಧೆಯು ಗ್ರಾಮೀಣ ಕ್ರೀಡೆಗಳ ಗುಂಪಿಗೆ ಸೇರುತ್ತದೆ. ಜೊತೆಗೆ ಸಾಮಾನ್ಯವಾಗಿ ಚಿಕ್ಕ ಮಕ್ಕಳ ವಿಶಿಷ್ಟ ಆಟಗಳನ್ನು ಕಾಣಬಹುದಾಗಿದೆ. ರಾಜನ ಬೆಳಗುಲಿಯಲ್ಲಿ ಕ್ರಿಕೆಟ್ ಆಟ ಜನಪ್ರಿಯ.

ಕುಡುಕೂರು ಗ್ರಾಮೀಣ ಕ್ರೀಡೆಗಳನ್ನು ಆಚರಿಸುವುದರಲ್ಲಿ ವಿಶೇಷ ಸ್ಥಾನ ಪಡೆದಿದೆ. ಇಲ್ಲಿ ದೀಪಾವಳಿ ಜಾತ್ರೆಯಲ್ಲಿ ಟಗರಿನ ಕಾಳಗ, ಕುಸ್ತಿ, ಕೋಳಿಯಂಕ, ಇಸ್ಪೀಟು, ಗೌಜಲಕ್ಕಿ ಕಾಳಗ– ಇವು ನಡೆದು ಬರುತ್ತಿದ್ದ ಸಾಂಪ್ರದಾಯಿಕ ಕ್ರೀಡೆಗಳು, ಇತ್ತೀಚೆಗೆ ಕಾನೂನಿನ ಭಯದಿಂದಾಗಿ ಮೇಲಿನ ಆಟಗಳು ಕಣ್ಮರೆಯಾಗುತ್ತಿವೆ.

ಗಂಗೂರಿನಲ್ಲಿ ಯುಗಾದಿ ಹಬ್ಬದಂದು ಆಡುವ ಒಟ್ಟಿ ಚೆಂಡಾಟ ಹಾಗೂ ಕಬಡ್ಡಿ. ಅತ್ಯಂತ ಪ್ರಸಿದ್ಧವಾದುದು. ಈ ಪಂದ್ಯದ ಖ್ಯಾತ ಕ್ರೀಡಾಪಟುಗಳೆಂದರೆ, ದೊಡ್ಡಸ್ವಾಮಿಗೌಡ, ಶಿವಣ್ಣೇಗೌಡ, ಗಂಗೇಗೌಡ ಪ್ರೇಮಕುಮಾರ್, ಮಂಜೇಗೌಡ, ಕುಮಾರ, ಮಾದೇವ, ಸುರೇಶ್, ರವೀಂದ್ರ, ಜಯಸ್ವಾಮಿ, ಲಕ್ಕೇಗೌಡ, ಕಾಳೇಗೌಡ, ಚಂದ್ರ,

ಸಣ್ಣಸ್ವಾಮಿ, ಮಾಳಗೇಗೌಡ, ಸಣ್ಣ ತಮ್ಮ, ಕರೀಗೌಡ, ಹುಚ್ಚಪ್ಪ, ಸಣ್ಣಮಾದ, ದೊಡ್ಡಮಾದ ಮುಂತಾದವರು. ಕಬಡ್ಡಿ ಆಟದಲ್ಲೂ ಇವರದು ಎತ್ತಿದ ಕೈ.

ರಾವಂದೂರಿನಲ್ಲಿ ಗ್ರಾಮೀಣ ಕ್ರೀಡೆಗಳೂ ಯಶಸ್ವಿಯಾಗಿ ನಡೆಯುತ್ತಿವೆ. ಅವುಗಳಲ್ಲಿ ಮುಖ್ಯವಾದವೆಂದರೆ ಓಕುಳಿ ಆಟ ಮತ್ತು ಗುಂಡೆತ್ತುವ ಕ್ರೀಡೆ, ತೊಪ್ಪೆಯೋಕುಳಿ, ಊರೋಕುಳಿ, ನೀರೋಕುಳಿಗಳು ಓಕುಳಿ ಆಟದ ಪ್ರಕಾರಗಳು, ಹಬ್ಬದ ಸಂದರ್ಭದಲ್ಲಿ ಊರಿನ ದೊಡ್ಡಮ್ಮತಾಯಿ ದೇವಸ್ಥಾನದ ಹತ್ತಿರದ ಸು. ೭೦ ಕೆ.ಜಿ. ಭಾರದ ಗುಂಡೆತ್ತುವುದು ಕೂಡ ಗ್ರಾಮೀಣ ಕ್ರೀಡಗಳ ಒಂದು ಪ್ರಕಾರವಾಗಿ ರಾವಂದೂರಿನಲ್ಲಿ ಆಚರಣೆಗೊಳ್ಳುತ್ತಿದೆ.

ಪಿರಿಯಾಪಟ್ಟಣ ತಾಲೂಕಿನಲ್ಲಿ ಕುಸ್ತಿ ವಿಶೇಷ ಸ್ಥಾನ ಪಡೆದುಕೊಂಡ ಕ್ರೀಡೆ, ಕುಸ್ತಿ ಮೂಲಕ ಪಿರಿಯಾಪಟ್ಟಣದ ಹೆಸರನ್ನು ಮೈಸೂರು ಪ್ರಾಂತದಲ್ಲಿ ಪ್ರಸಿದ್ಧಿಗೊಳಿಸಿದವರೂ ಇಲ್ಲಿದ್ದಾರೆ. ಅಲ್ಲದೆ ಪಿರಿಯಾಪಟ್ಟಣವನ್ನು ಆಳಿದ ರಾಜಮನೆತನಗಳು ಕುಸ್ತಿ ಆಟಕ್ಕೆ ನೀಡಿದ್ದ. ಪ್ರೋತ್ಸಾಹಗಳು ಕೂಡ ಇತಿಹಾಸದಿಂದ ತಿಳಿದು ಬರುತ್ತದೆ. ತಾಲೂಕಿನ ಬಹುತೇಕ ಗ್ರಾಮಗಳಲ್ಲಿ ಇಂದಿಗೂ ಕುಸ್ತಿ ವೈಭವ ಪೂರ್ಣವಾಗಿ ನಡೆಯುತ್ತಾ ಬಂದಿದೆ, ಘಟಾನುಘಟಿಗಳಿಗೆ ಮಣ್ಣು ಮುಕ್ಕಿಸಿ ಮೆರೆದ ಪೈಲ್ವಾನರುಗಳು ಕುಸ್ತಿಯನ್ನು ಪ್ರೋತ್ಸಾಹಿಸುವ ಜನತೆ ಇಂದಿಗೂ ತಾಲೂಕಿನಲ್ಲಿ ಇದ್ದಾರೆ. ಕುಸ್ತಿ ನಡೆಯುತ್ತದೆ ಎಂದರೆ ಹತ್ತಾರು ಮೈಲಿಗಳಿಂದ ನೋಡಲು ಬರುವ ಕುಸ್ತಿ ಪ್ರಿಯರು ಈ ತಾಲೂಕಿನಲ್ಲಿ ಕಡಿಮೆ ಇಲ್ಲ, ಈ ಕಾರಣಗಳಿಂದಾಗಿ ಇಂದಿಗೂ 'ಗರಡಿಮನೆ'ಗಳನ್ನು ಪೈಲ್ವಾನರನ್ನೂ ಅಲ್ಲಲ್ಲಿ ಕಾಣಬಹುದು.

ಭುವನಹಳ್ಳಿಯಲ್ಲಿ ಪೈಲ್ವಾನರಿಗೆ ಹೇಳಿ ಮಾಡಿಸಿದ ಗರಡಿ ಇದ್ದು ಇಲ್ಲಿನ ಕರಿಸಿದ್ದೇಗೌಡ, ಸುಬ್ಬೇಗೌಡ, ಗೋವಿಂದ ಶೆಟ್ಟರು ನುರಿತ ಪೈಲ್ವಾನರು, ಪ್ರತಿದಿನ ತಾಲೀಮು ಕಠಿಣ ಪರಿಶ್ರಮದಿಂದ ಸಾಧನೆಯ ದಿಕ್ಕಿನಲ್ಲಿ ಇವರು ನಡೆಯುತ್ತಿದ್ದಾರೆ. ಹಾಗೆಯೇ ಕಣಗಾಲಿನ ವೆಂಕಟರಾಮಯ್ಯ ಅವರೂ ಕುಸ್ತಿ ಪಟುಗಳಲ್ಲಿ ನುರಿತ ಪೈಲ್ವಾನರು. ನೀಲಂಗಾಲ ಕುಸ್ತಿಗೆ ಮತ್ತೊಂದು ಹೆಸರು ಎಂಬ ಖ್ಯಾತಿ ಹೊಂದಿದ ಗ್ರಾಮ, ಇಲ್ಲಿನ ಪೈಲ್ವಾನ್ ಅಪ್ಪಾದೊರೆ ಗರಡಿಮೇಷ್ಟ್ರು, ಇವರ ಶಿಷ್ಯರಲ್ಲಿ ಅನೇಕರು ತಾಲೂಕಿನಲ್ಲಿ ಖ್ಯಾತರಾದವರು, ಪೈ. ಸಿದ್ದೇಗೌಡ, ಪೈ. ಪುಟ್ಟ ಸೋಮಾಚಾರಿ, ಪೈ. ದೊಡ್ಡಮಲ್ಲಯ್ಯ, ಪೈ. ಕರೀಗೌಡರ ಜವರ ಅವರು ಉತ್ತಮ ಸಾಧನೆ ತೋರುತ್ತಿರುವವರು. ಪೈ. ಪುಟ್ಟಸ್ವಾಮಾಚಾರರು, ಕೆ.ಆರ್. ನಗರದ ಪೈಲ್ವಾನ್ ಜೊತೆ ಸೆಣಸಿ ಗೆದ್ದವರು. ಹಾಗೆಯೇ ಮಿಸಿಗೌಡರ ಪೈ. ಪೀರೇಗೌಡರು ಮೈಸೂರಿನ ಯುವ ಪೈಲ್ವಾನನನ್ನು ಮಣ್ಣು ಮುಕ್ಕಿಸಿದವರು ಪೈ. ಸಿದ್ದೇಗೌಡರು ಇಡೀ ತಾಲೂಕಿನಲ್ಲಿಯೇ ಪ್ರಸಿದ್ದರು, ಇವರಿಗೆ ತಮ್ಮ ಗುರುಗಳಾದ ಪೈ. ಅಪ್ಪದೊರೆಯವರ ವಿರುದ್ಧವೇ ಸೆಣಸಿ ಗೆದ್ದವರು ಇವರು.

ಪೂನಾಡಹಳ್ಳಿಯಲ್ಲಿ ಮೂಲೆಮನೆ ತಿಮ್ಮೇಗೌಡ ಮತ್ತು ಸದಾಶಿವಯ್ಯ ಅವರು ಒಂದು ಕಾಲದಲ್ಲಿ ಪ್ರಸಿದ್ಧಿ ಪಡೆದ ಪೈಲ್ವಾನರು, ಈ ಹಿಂದೆ ಇಲ್ಲಿ ಗರಡಿಮನೆಯು ಇದ್ದಿತೆಂದು ಅಲ್ಲಿಯೇ ತಾವು ತಾಲೀಮು ಮಾಡುತ್ತಿದ್ದದ್ದಾಗಿ ಹೇಳುತ್ತಾರೆ ತಿಮ್ಮೇಗೌಡರು. ಲಿಂಗಾಪುರದ ಬಾಲಕ ಜಗದೀಶ್ ಕುಮಾರ್ ಹುಣಸವಾಡಿ ಶಾಲೆಯ ಕುಸ್ತಿಪಟು. ತಾತನಹಳ್ಳಿ ಕರಿಯಣ್ಣ. ಚಿಕ್ಕಯ್ಯ, ಟಿ. ದೇವಯ್ಯ. ಪ್ರಸಿದ್ಧ ಪೈಲ್ವಾನರು. ಅಬ್ಬೂರಿನ ಪೈಲ್ವಾನನ ಜೊತೆ ಇಲ್ಲಿನ ಚಿಕ್ಕಯ್ಯ ಅವರು ಸೆಣಸಾಡಿ ಮಣ್ಣು ಮುಕ್ಕಿಸಿದ ಕತೆಯನ್ನು ಇಲ್ಲಿನ ಜನರು ಇಂದಿಗೂ ನೆನೆದುಕೊಳ್ಳುತ್ತಾರೆ. ಬೋರೆಹೊಸಳ್ಳಿಯ ಗರಡಿ ಆಚಾರ್ಯ ಮುದ್ದಮಯ್ಯ ಅವರು ಊರಿನ ಸುಮಾರು ಹದಿನೈದು ಹುಡುಗರಿಗೆ ಕುಸ್ತಿ ತರಬೇತಿ ನೀಡಿದ್ದಾರೆ. ಜವನೀಕುಪ್ಪೆಯಲ್ಲಿ ಇಂದಿಗೂ ಆಂಜನೇಯ ಸ್ವಾಮಿ ಗರಡಿ ಇದೆ. ಈ ಊರಿನ ಪೈ. ಸಣ್ಣತಮ್ಮೇಗೌಡರು ಕೆಲ್ಲೂರಿನಲ್ಲಿ ನಡೆದ ಕಾಟಾಕುಸ್ತಿಯಲ್ಲಿ ಹಂಡಿತವಳ್ಳಿ ಕೃಷ್ಣನನ್ನು ಸೋಲಿಸಿದ್ದು ಅವರ ಸಾಧನೆ. ಕಿರುನೆಲ್ಲಿಯ ಕೆಂಪರಾಜು ಮತ್ತು ಕರಿಯಪ್ಪ ಪ್ರಸಿದ್ಧ ಪೈಲ್ವಾನರು. ಆ ಮೊದಲು ಈ ಊರಿನಲ್ಲಿ ಗರಡಿ ಇದ್ದಿತು. ಕೆಂಪರಾಜು ಅವರು ಕಡಕೊಳದ ಪೈ. ಬೊಜ್ಜನಾಯ್ಕರನ್ನು ಗೋಣಿಕೊಪ್ಪದಲ್ಲೂ ; ಕಲ್ಕುಣಿಕೆ ಕೃಷ್ಣನನ್ನು ಹದಿನಾರು ಗ್ರಾಮದಲ್ಲೂ ; ಮಾದೇವನಾಯ್ಕನನ್ನು ಕಡಕೊಳದಲ್ಲೂ, ನಂಜನಗೂಡಿನಲ್ಲಿ ಜಗದೀಶನನ್ನು ಗೆದ್ದು ಮಿಂಚಿದವರು. ತಮ್ಮಡಹಳ್ಳಿಯ ನಾಗರಾಜೇಗೌಡ ಮತ್ತು ಸುಬ್ಬೇಗೌಡರು ಪ್ರಸಿದ್ಧ ಪೈಲ್ವಾನರು, ಚನ್ನೇನಹಳ್ಳಿಯ ವೆಂಕಟರಾಮು, ಕಂಪಲಾಪುರದ ಮಾರೇಗೌಡ ತಾಲೂಕಿನಲ್ಲಿ ಹೆಸರಾದ ಪೈಲ್ವಾನರು.

ತಾಲ್ಲೂಕು ಕೇಂದ್ರ ಪಿರಿಯಾಪಟ್ಟಣದ ತೊರಗೇರಿಯಲ್ಲಿ ಕಾಳಪ್ಪ, ಕರಿಯಪ್ಪ, ಚಿಕ್ಕವೀರ, ದ್ಯಾವರಪ್ಪ ಅವರು ಪ್ರಸಿದ್ಧರಾದ ಪೈಲ್ವಾನರು, ಪಟ್ಟಣದ ದೊಡ್ಡಬೀದಿಯಲ್ಲಿನ ಚನ್ನಬಸಪ್ಪನವರ ಗರಡಿಯಲ್ಲಿ ತಯಾರುಗೊಂಡ ಹನುಮಪ್ಪನ ಕಾಳ, ಸಂತೇಮಾಳದ ಜವರ, ಹನುಮಪ್ಪನ ಮಗ ಚಿಕ್ಕೀರ ಕಗ್ಗುಂಡಿಯ ಹೊನ್ನ, ತೊರಗೇರಿಬೀದಿಯ ಕಾಳನಾಯ್ಕ, ಕಿರುನೆಲ್ಲಿ ಕರಿಯಪ್ಪ ಮುಂತಾದವರು ತಮ್ಮ ಸಾಮರ್ಥ್ಯದಿಂದ ಹೆಸರುವಾಸಿಯಾದ ಪೈಲ್ವಾನರು. ಇಂದಿಗೂ ತಾಲೂಕಿನಲ್ಲಿ ಇವರ ವರ್ಚಸ್ಸು ಅಳಿಸಿಲ್ಲ. ಅವಿರತ ಶ್ರಮ, ತಾಲೀಮು. ದೈಹಿಕ ಸಮತೋಲನತೆ ಇತ್ಯಾದಿಗಳಿಂದ ಉತ್ತಮ ಕುಸ್ತಿ ಪಟುವಾಗಿ ರೂಪುಗೊಂಡ ಇವರ ಸಾಧನೆಗಳು ಕುಸ್ತಿ ಪ್ರಿಯರನ್ನು ಆಕರ್ಷಿಸಿವೆ.

ಈ ಆಟಗಳಲ್ಲದೆ ಹಬ್ಬಹರಿದಿನಗಳಲ್ಲಿ ತೆಂಗಿನಕಾಯಿಗೆ ಗುರಿಯಿಟ್ಟು ಹೊಡೆಯುವ ಸ್ಪರ್ಧೆ, ವಿಶೇಷವಾಗಿ ಯುಗಾದಿಯಲ್ಲಿ ಮೊಟ್ಟೆ ಇಕ್ಕುವ ಆಟ, ಹುಲಿಕುರಿಯಾಟ, ಕುಂಟೊಬಿಲ್ಲೆಯಾಟ, ಕಣ್ಣಾಮುಚ್ಚೆಯಾಟ, ಕತ್ತಿವರಸೆ, ದೊಣ್ಣೆವರಸೆ ಮುಂತಾದ ಸಾಂಪ್ರದಾಯಿಕ ಆಟಗಳನ್ನು ಜನ ಈಗಲೂ ಆಡುತ್ತಾರೆ.

* * * *